

ಹೊಸ ವರ್ಷದ ಸಂಭ್ರಮ

## 2022 ಹೇಗಿರಬೇಕು?



### ಇರುವುದೊಂದೇ ಭೂಮಿಯ ಉಳಿಸೋಣ

ಜಾಗತಿಕ ತಾಪಮಾನದ ಪರಿಣಾಮ ಹೆಚ್ಚುತ್ತಿರುವ ಪ್ರಕೃತಿ ವಿಕೋಪಗಳು ಸೇರಿದಂತೆ ಕೋವಿಡ್‌ನಂತಹ ಸಾಂಕ್ರಾಮಿಕ ರೋಗರುಜಿನಗಳು ಜಗದ ಜನಜೀವನವನ್ನೇ ಅಸ್ತವ್ಯಸ್ತಗೊಳಿಸಿವೆ. ಕಳೆದೆರಡು ವರ್ಷಗಳಂತೂ ಪ್ರತಿಯೊಬ್ಬರನ್ನೂ ಆತಂಕ ಹಾಗೂ ನಿರಾಶೆಯಲ್ಲಿ ಮುಳುಗಿಸಿವೆ. 2022 ಈ ಎಲ್ಲ ಆತಂಕಗಳನ್ನು ತೊಡೆದು ಹಾಕಿ, ಬದುಕಿನಲ್ಲಿ ಮತ್ತೆ ಭರವಸೆ ಮೂಡಿಸುವ ಆಶಾಕಿರಣವಾಗಲಿ ಎಂದು ಆಶಿಸುವೆ.

ಒಬ್ಬ ಕೃಷಿಕನಾಗಿ ನಾನು, 2022ರಲ್ಲೂ ಮುಖ್ಯವಾಗಿ ಬಯಸುವುದು ಸಕಾಲಿಕ ಮಳೆ ಹಾಗೂ ಉತ್ತಮ ಬೆಳೆಯನ್ನು ಮಾತ್ರ. 2021ರ ಐತಿಹಾಸಿಕ ಕೃಷಿ ಹೋರಾಟ ಬರುವ ದಿನಗಳಲ್ಲಿ ರೈತರ ಬದುಕಿನಲ್ಲಿ ಆತ್ಮವಿಶ್ವಾಸ ಮೂಡಿಸಲಿದೆ ಎಂದುಕೊಂಡಿದ್ದೇನೆ. ರೈತರ ಆತ್ಮಹತ್ಯೆಗಳಿಗೆ ಮುಖ್ಯವಾಗಿ ಸರ್ಕಾರದ ಆತ್ಮಹತ್ಯಾತ್ಮಕ ಕೃಷಿಧೋರಣೆಗಳೇ ಕಾರಣವಾಗಿದ್ದು, ಮುಂದಿನ ದಿನಗಳಲ್ಲಿ ಕೃಷಿಯ ಉಳಿವಿಗೆ, ಕೃಷಿಕರ ಬಲವರ್ಧನೆಗೆ ಆದ್ಯತೆ ನೀಡುವ ಬದ್ಧತೆಯನ್ನು ಸರ್ಕಾರಗಳು ತೋರುತ್ತವೆ ಎಂಬ ನಂಬುಗೆ ನನ್ನದು.

‘ಇರುವುದು ಇದೊಂದೇ ಭೂಮಿ’ ಆದ್ದರಿಂದ ಮಣ್ಣು, ನೀರು ಮತ್ತು ವಾಯುಮಾಲಿನ್ಯವನ್ನು ತಡೆಯುವುದು ಇಂದಿನ ಅಗತ್ಯವಾಗಿದೆ. ದಿನೇದಿನೇ ಹೆಚ್ಚುತ್ತಿರುವ ಉಳ್ಳವರು ಮತ್ತು ಇಲ್ಲದವರ ನಡುವಿನ ಅಂತರ ಕಿರಿದಾಗಿ ಸುಖನೆಮ್ಮದಿಯ ದಿನಗಳು ನನಸಾಗಲಿ ಎಂದು ಆಶಿಸುವೆ.

**–ಚಂಸು ಪಾಟೀಲ** ರೈತ–ಬರಹಗಾರ, ರಾಣೆಬೆನ್ನೂರು

ಭಸ್ಮಾಸುರರನ್ನು ನಮ್ಮ ಹಿರೀಕರು ಕಂಡಿಲ್ಲ, ಅರಗಿಸಿಕೊಂಡಿಲ್ಲ. ಈ ಕೊರೊನಾ ಕೂಡ ಅಷ್ಟೇ. ಇಂದಲ್ಲಾ ನಾಳೆ ಅದು ನಮ್ಮ ಅಂಕೆಗೆ ಒಗ್ಗೊಡಲೇಬೇಕು. ಅಲ್ಲಿಯವರೆಗೆ ಬೇಕಾದುದು ಸಹನೆ ಹಾಗೂ ಕರುಣೆ. ಕೊರೊನಾ ಭಯ ಬಿಡಿ. ಭಾರತೀಯರ ಅಸ್ತಿತ್ವವನ್ನೇ ಹೊಸಕಿಹಾಕಿದ್ದ ಬ್ರಿಟಿಷರ ಅಧಿಕಾರಶಾಹಿಯ ವಿರುದ್ಧ ಜನರಲ್ಲಿದ್ದ ಭಯವನ್ನು ಬಿಡುಗಡೆಗೊಳಿಸಿದ್ದು ಮಹಾತ್ಮ ಗಾಂಧಿ. ಈಗ ಕೊರೊನಾ ವಿರುದ್ಧದ ಸೆಣಸಿನಲ್ಲಿ ನಾವು ನಮ್ಮ ಮನಸ್ಸುಗಳನ್ನು ಮೊದಲು ಭಯಮುಕ್ತಗೊಳಿಸಬೇಕು. ನಿರ್ಭೀತಿಗಿಂತಲೂ ಮಿಗಿಲಾದ ಲಸಿಕೆ ಮತ್ತೊಂದಿಲ್ಲ.

ಕರುಣೆ ಎಂದೆನಲ್ಲವೆ? ‘ದಯವೇ ಬೇಕು ಸಕಲ ಪ್ರಾಣಿಗಳಲ್ಲಿ’ ಎಂದ ಅಣ್ಣ ಬಸವಣ್ಣನ ಮಾತು ಸಹಸ್ರಮಾನದ ಹೊಸ್ತಿಲಲ್ಲಿದೆ. ಈಗಲಾದರೂ ಆ ಮಾತನ್ನು ಕಾರ್ಯರೂಪಕ್ಕೆ ತರಲು ನೀವು ಮನಸ್ಸು ಮಾಡಬೇಕು. ಅಲ್ಲಮ, ಬಸವಣ್ಣ, ಅಕ್ಕಮಹಾದೇವಿ – ಇಂಥ ಶರಣರ ‘ಅನುಭವ ಮಂಟಪ’ ಚರಿತ್ರೆಯಲ್ಲೇ ಏಕೆ ಉಳಿಯಬೇಕು. ವರ್ತಮಾನದಲ್ಲೂ ಆ ಶರಣ ಮಂಟಪ ಜೀವಗೊಳ್ಳಬೇಕು; ಆ ಮೂಲಕ ಕನ್ನಡ ನಾಡಿನ ಮಾದರಿ ವಿಶ್ವದ ದಾರಿಯಾಗಬೇಕು. ಆ ನಿಟ್ಟಿನಲ್ಲಿ ನಿಮ್ಮ ಪಾತ್ರವೇನು? ಅದು ನೀವೇ ಯೋಚಿಸಿ ನಿರ್ಣಯಬೇಕಾದ ವಿಷಯ. ನಿಮ್ಮ ಯೋಚನೆಗೆ ಅನುಕೂಲವಾಗಲೆಂದು ಒಂದು ಪ್ರಸಂಗ ನೆನಪಿಸುವೆ – ಲಂಕೆಗೆ ಹೋಗಲು ಸಮುದ್ರಕ್ಕೆ ರಾಮನ ವಾನರಸೇನೆ ಸೇತುವೆ ಕಟ್ಟಿತಲ್ಲ, ಆ ಮಹತ್ಕಾರ್ಯದಲ್ಲಿ ಅಳಿಲೊಂದು ತನ್ನ ಪುಟ್ಟ ಕೈಗಳಿಂದ ಸೇತುವೆಗೆ ಮರಳು ಸೇರಿಸಿತು. ಅಳಿಲಿನ ಸೇವೆಯನ್ನು ರಾಮ ಗುರ್ತಿಸಿದ, ಹರಸಿದ. ಆ ಅಳಿಲಿನ ಪಾತ್ರವನ್ನೂ ನಾವು ವಹಿಸಲಾರೆವೆ?

ಹೊಸ ಕ್ಯಾಲೆಂಡರ್ ಗೋಡೆಗೇರಿಸುವ ಸಂದರ್ಭದಲ್ಲಿ ಒಂದಷ್ಟು ನಿರ್ಣಯಗಳನ್ನು ಕೈಗೊಳ್ಳುವುದು ವರ್ಷಂಪ್ರತಿಯ ರೂಢಿಯಷ್ಟೆ. ‘ಈ ವರ್ಷ ಯಾವ ನಿರ್ಣಯವೂ ಇಲ್ಲ’ ಎನ್ನುವುದೂ ಒಂದು ನಿರ್ಣಯವೇ. ಹಾಂ, ನಿಮ್ಮ ನಿರ್ಣಯ ನಿಮ್ಮದು, ಸಲಹೆ ಕೊಡುವ ಅಧಿಕಪ್ರಸಂಗವನ್ನು ನಾನು ಮಾಡುವುದಿಲ್ಲ. ಆದರೆ, ನಿಮ್ಮಿಂದ ಒಂದಷ್ಟು ಭರವಸೆಗಳನ್ನು